ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/105/ಎಂಎಸ್‌ಸಿ/2013 / 3415

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 13.12.2013.

## ಸುತ್ತೋಲೆ

ವಿಷಯ: ಸಂಸ್ಥೆಯಲ್ಲಿ ಸಂದರ್ಶಕರ ಪುಸ್ತಕ ನಿರ್ವಹಿಸುವ ಬಗ್ಗೆ.(VISITORS BOOK)

ಉಲ್ಲೇಖ: ಮಾನ್ಯ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಇಲಾಖೆಯ ಪುನರ್ ಪರಿಶೀಲನಾ ಸಭೆ ದಿನಾಂಕ: 09.11.2013.

**********

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ/ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಸ್ಥೆ, ಬೆಂಗಳೂರು ಹಾಗೂ ಕಿರಿಯ ತಾಂತ್ರಿಕ ಶಾಲೆಗಳು, ಪಾಲಿಟೆಕ್ನಿಕ್ ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ಸಂದರ್ಶಕರ ಪುಸ್ತಕ ನಿರ್ವಹಣೆ ಬಗ್ಗ ಉಲ್ಲೇಖದಲ್ಲಿ ತಿಳಿಸಿರುವಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 09.11.2013 ರಂದು ನಡೆದ ಇಲಾಖೆಯ ಪುನರ್ ಪರಿಶೀಲನಾ ಸಭೆಯಲ್ಲಿ (Departmental Review Meeting) ಸೂಚನೆ ನೀಡಿರುವುದರಿಂದ ಸಂಸ್ಥೆಗಳಿಗೆ ಭೇಟಿ ನೀಡುವ ಇಲಾಖೆಯ ಪರಿಶೀಲನಾ ಅಧಿಕಾರಿಗಳು/ಉನ್ನತ ಮಟ್ಟದ ಸಮಿತಿಯ ಅಧಿಕಾರಿಗಳು/ಕಟ್ಟಡ ಕಾಮಗಾರಿ ಪರಿಶೀಲನಾ ಅಧಿಕಾರಿಗಳು/ಇತರೆಯವರಿಂದ ಸಂದರ್ಶನ ಪುಸ್ತಕದಲ್ಲಿ ಸಲಹೆ ಸೂಚನೆಗಳನ್ನು ಪಡೆಯಬೇಕಾಗಿರುವುದರಿಂದ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಎಲ್ಲಾ ಪ್ರಾಚಾರ್ಯರುಗಳು ತಕ್ಷಣವೇ ಕೆಳಗೆ ತಿಳಿಸಿರುವ ನಮೂನೆಯಲ್ಲಿ ಸಂದರ್ಶಕರ ಪುಸ್ತಕವನ್ನು ನಿರ್ವಹಿಸಬೇಕೆಂದು ಸೂಚಿಸಲಾಗಿದೆ.

### ನಮೂನೆ-1
### ಸಂದರ್ಶಕರ ಪುಸ್ತಕ

| ಕ್ರ ಸಂ | ದಿನಾಂಕ | ಸಮಯ | ಸಂಸ್ಥೆಗೆ ಭೇಟಿ ನೀಡಿದ ಅಧಿಕಾರಿಗಳು/ಇತರೆಯವರ ಹೆಸರು/ವಿಳಾಸ/ದೂರವಾಣಿ | ಷರಾ/ಅಭಿಪ್ರಾಯ | ಸಹಿ |
|---|---|---|---|---|---|
| (1) | (2) | (3) | (4) | (5) | (6) |

ಆಯುಕ್ತರು ನಿರ್ದೇಶಕರಿಂದ
ಅನುಮೋದಿಸಲ್ಪಟ್ಟಿದೆ

ನಿರ್ದೇಶಕರು

ಇವರಿಗೆ,

1. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಇಂಜನಿಯರಿಂಗ್ ಕಾಲೇಜುಗಳು/ಪಾಲಿಟೆಕ್ನಿಕ್, ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಸ್ಥೆ, ಬೆಂಗಳೂರು ಹಾಗೂ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳ ಸೂಕ್ತ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

2. ಇ–ಆಡಳಿತ ವಿಭಾಗದ ಅಧಿಕಾರಿಗಳಿಗೆ–ತಕ್ಷಣವೇ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.

**ಪ್ರತಿ:**

1. ನಿರ್ದೇಶಕರವರ ಆಪ್ತಶಾಖೆಗೆ.
2. ನಿರ್ದೇಶನಾಲಯದ ಜಂಟಿ ನಿರ್ದೇಶಕರುಗಳು (ಆಡಳಿತ) (ಪರೀಕ್ಷೆ) (ಯೋಜನೆ) (ಸಿಡಿಸಿ) (ತನಿಖೆ).
3. ಆಡಳಿತಾಧಿಕಾರಿಗಳು ಇವರಿಗೆ ಸೂಕ್ತ ಕ್ರಮಕ್ಕಾಗಿ–ನಿರ್ದೇಶನಾಲಯದಲ್ಲಿ ಸಂದರ್ಶಕರ ಪುಸ್ತಕ ನಿರ್ವಹಿಸಲು ಕ್ರಮ ತೆಗೆದುಕೊಳ್ಳುವುದು.
4. ಸಹಾಯಕ ಆಡಳಿತಾಧಿಕಾರಿಗಳು – 1, 2, 3.
5. ರಿಜಿಸ್ಟ್ರಾರ್ (ಆಡಳಿತ).
6. ಸಾರ್ವಜನಿಕ ಸಂಪರ್ಕಾಧಿಕಾರಿ.